## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಚೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ, ಬೆಂಗಳೂರು.

ಸಂಖ್ಯೆ: ಸ.ಅ/ವಾ-46/ಪಿ.ಆರ್/ 06 /2020-21 ದಿನಾಂಕ:28-12-2020

### ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 24-12-2020 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ. ಎಸ್.ಪ್ರಭಾಕರ್ | ಮುಖ್ಯ ಅಭಿಯಂತರರು | ಹಾಜರಿ |
| 3. | ಶ್ರೀ. ಅಶೋಕ್ | ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ) | ಹಾಜರಿ |
| 4. | ಶ್ರೀ.ವಿಶ್ವನಾಥ್.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆ.ಸಿ.ನಗರ ಉಪವಿಭಾಗ (ವಾರ್ಡ್ 47 ರ ನೋಡಲ್ ಅಧಿಕಾರಿಗಳು) | ಹಾಜರಿ |
| 5. | ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 | ಹಾಜರಿ |
| 6. | ಶ್ರೀಮತಿ ಶೈಲಜಾ | ಎ.ಆರ್.ಓ ( ಸಮಾಜ ಕಲ್ಯಾಣ ಇಲಾಖೆ) | ಹಾಜರಿ |
| 7. | ಶ್ರೀ ಕೇಶವ್ | ಅಸೆಸ್ಸರ್ ಕಂದಾಯ ಇಲಾಖೆ | ಹಾಜರಿ |
| 8. | ಶ್ರೀ ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿ |
| 9. | ಶ್ರೀಮತಿ ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿ | ಗೈರು ಹಾಜರಿ |
| 10. | ಸುವರ್ಣದೇವಿ.ವೈ.ಬಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 11. | ಟಿ.ಪಿ.ಶಂಕರ್ | ಮೇಜರ್ ರೋಡ್ಸ್ | ಹಾಜರಿ |
| 12. | ಶ್ರೀ ಮೂರ್ತಿ | ಕಂದಾಯ ಅಧಿಕಾರಿ | ಹಾಜರಿ |
| 13. | ಶ್ರೀ. ರವೀಂದ್ರ | ಅರಣ್ಯಾಧಿಕಾರಿ | ಹಾಜರಿ |
| 14. | ಆರ್. ಮನೋಹರ್ | ಬೆಸ್ಕಾಂ. | ಹಾಜರಿ |
| 15. | ಮಲ್ಲಿಕಾರ್ಜುನ್ ನಾಯಕ್ | ಮಾರ್ಷಲ್ | ಹಾಜರಿ |

ವಾರ್ಡ್ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಜೆಚ್.ಜಿ.ರವೀಂದ್ರ, ಭಾ.ಸ.ಸೇ ರವರು ವಿಶೇಷ ಅತಿಥಿಗಳಾದ ಶ್ರೀ.ಎಸ್.ಪ್ರಭಾಕರ್ (ಮುಖ್ಯ ಅಭಿಯಂತರರು) (ಪೂರ್ವ) ಶ್ರೀ.ಅಶೋಕ್ ಹಿಂದಾ ಕಾರ್ಯಪಾಲಕ ಅಭಿಯಂತರರು ಹೆಬ್ಬಾಳ ವಿಭಾಗ ರವರು, ಶ್ರೀ ವಿಶ್ವನಾಥ್.ಎಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆ.ಸಿ ನಗರ ಉಪವಿಭಾಗ ಮತ್ತು ವಾರ್ಡ್ 47 ರ ನೋಡಲ್ ಅಧಿಕಾರಿಗಳು ರವರನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

- ಆರ್.ಟಿ ನಗರ 2ನೇ ಬ್ಲಾಕ್‌ನಲ್ಲಿ ಬರುವ ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿರುವಂತಹ ಅನುಪಯುಕ್ತ ವಸ್ತುಗಳು ಹಾಗೂ ದಿನನಿತ್ಯದಂತೆ ಉತ್ಪತ್ತಿಯಾಗುವ ಡೆಬ್ರಿಸ್‌ಗಳನ್ನು ಆಯ ದಿನದಂತೆ ತೆರವುಗೊಳಿಸಲು ಸೂಚಿಸಲಾಯಿತು.
- ವಾರ್ಡ್‌ನಲ್ಲಿರುವಂತಹ ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿ ಮಾಡಿಕೊಂಡು ಹಾಕಿರುವಂತಹ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.
- ವೈಟ್‌ಹೌಸ್ ಅಪಾರ್ಟ್‌ಮೆಂಟ್ ಎದುರು ರಸ್ತೆಯಲ್ಲಿ ಪುಟ್‌ಪಾತ್ ಒತ್ತುವರಿ ಮಾಡಿಕೊಂಡು ಪ್ಲವರ್ ಫಾಟ್‌ಗಳನ್ನು ಇಟ್ಟಿದ್ದು, ಅವುಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.
- ವಾರ್ಡ್ ಸುತ್ತಮುತ್ತಲಿನ ಎಲೆಕ್ಟ್ರಿಕಲ್ ಕೇಬಲ್‌ಗಳ ಮೇಲೆ ಮರದ ಕೊಂಬೆಗಳು ಚಾಚಿಕೊಂಡಿದ್ದು ಅದನ್ನು ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು
- ಚುಂಚಪ್ಪ ಬ್ಲಾಕ್‌ನಲ್ಲಿ ಬನಶಂಕರಿ ದೇವಸ್ಥಾನದ ಹತ್ತಿರ ಬ್ಲಾಕ್‌ಸ್ಪಾಟ್ ಇದ್ದು, ಅನ್ನು ತೆರವುಗೊಳಿಸಿ ಆ ಜಾಗಕ್ಕೆ ಸಿ.ಸಿ ಕ್ಯಾಮೇರಾವನ್ನು ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಪಟೇಲ್ ಸಿಂಗ್ ರಸ್ತೆ ಮತ್ತು ಸುತ್ತಮುತ್ತಲಿನ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಜಾಸ್ತಿಯಾಗಿದ್ದು ಮತ್ತು ಅನಧಿಕೃತ ಪಾರ್ಕಿಂಗ್‌ನ್ನು ತಡೆಯಲು ಟ್ರಾಫಿಕ್ ಪೋಲೀಸ್ ಅಧಿಕಾರಿಗಳಿಗೆ ನೋ ಪಾರ್ಕಿಂಗ್ ನಾಮಫಲಕ ಹಾಕಲು ಸೂಚಿಸಲಾಯಿತು.
- ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಮಾತನಾಡಿ ಸರ್ಕಾರದಿಂದ ಬರುವಂತಹ ಯೋಜನೆಗಳಾದ ಉಚಿತ ಲ್ಯಾಪ್‌ಟಾಪ್ ಮತ್ತು ಹೊಲಿಗೆ ತರಬೇತಿ ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.
- ಸಾರ್ವಜನಿಕ ಶೌಚಾಲಯ ಮತ್ತು ಮುರಿದು ಹೋದಂತಹ ಚರಂಡಿ ಸ್ಲಾಬ್‌ಗಳನ್ನು ಗುರುತಿಸಿ ದುರಸ್ತಿ ಪಡಿಸಲು ಮೈಸಿಟಿ ಮೈಬಜೆಟ್ ಅಡಿಯಲ್ಲಿ ಸೂಚಿಸಲಾಯಿತು.
- ವಾರ್ಡ್‌ನಲ್ಲಿರುವ ಹಲವು ಬ್ಲಾಕ್‌ಸ್ಪಾಟ್‌ಗಳ ಬಗ್ಗೆ ವಾರ್ಡ್‌ನ ಜನರಿಗೆ ಜಾಗೃತಿ ಮೂಡಿಸಲು ತಿಳಿಸಲಾಯಿತು.
- ನೋಡಲ್ ಅಧಿಕಾರಿಗಳಾದ ಶ್ರೀ.ಎಸ್.ರವೀಂದ್ರ ರವರು PM Street Vendor's Atma Nirbhar Nidhi ಯೋಜನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.
- ಪುಟ್‌ಪಾತ್ ಮೇಲೆ ವಸ್ತುಗಳನ್ನು ಮಾರಾಟ ಮಾಡಿಕೊಂಡು ಜೀವನ ನಡೆಸುತ್ತಿರುವ ಚಿಕ್ಕ ಮಕ್ಕಳು ಮತ್ತು ನಿರಾಶ್ರಿತರ ಹಾಗೂ ರಾತ್ರಿ ವಸತಿರಹಿತರ ಸಮೀಕ್ಷೆ ನಡೆಯುತ್ತಿದ್ದು, ವಾರ್ಡ್‌ನಲ್ಲಿ ಈ ತರಹದ ಮಕ್ಕಳು ಹಾಗೂ ನಿರಾಶ್ರಿತರು ಕಂಡಲ್ಲಿ ಸ್ಥಳೀಯ ನಿವಾಸಿಗಳು ಅಧಿಕಾರಿಗಳಿಗೆ ತಿಳಿಸಲು ಸೂಚಿಸಲಾಯಿತು.
- ರಸ್ತೆ ಬದಿಯಲ್ಲಿ ತಳ್ಳು ಗಾಡಿಯ ಮಾರಾಟಗಾರರಿಗೆ ಹಸಿ ಕಸ ಮತ್ತು ಒಣ ಕಸಗಳನ್ನು ಬೇರೆ ಮಾಡಿಕೊಡಲು ಅರಿವು ಮೂಡಿಸಲು ಸೂಚಿಸಲಾಯಿತು.

* ವಾರ್ಡ್‌ನಲ್ಲಿನ ಬ್ಲಾಕ್‌ಸ್ಪಾಟ್‌ಗಳಲ್ಲಿ ಸಿ.ಸಿ ಕ್ಯಾಮೆರಗಳನ್ನು ಅಳವಡಿಸಲಾಗಿದ್ದು, ಕ್ಯಾಮೇರಾ ಫುಟೇಜಸ್‌ಗಳನ್ನು ವೀಕ್ಷಿಸಿ ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸಲು ಮಾರ್ಷಲ್ ಮತ್ತು ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 46, ಜೆ.ಸಿ.ನಗರ

ಸಹಿ/-
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 46, ಜೆ.ಸಿ ನಗರ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.